ದಿನಾಂಕಃ 31.05.2023 ರಂದು ಮುಖ್ಯ ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಶ್ರೀ BSP ವಕೀಲರಿಂದಃ

ಸಾಕ್ಷ್ಯರೂಪದಲ್ಲಿ ಹಾಜರು ಪಡಿಸಿರುವ ನನ್ನ ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ತಿಳಿದುಕೊಂಡು ನಾನು ನನ್ನ ಸಹಿ ಮಾಡಿದ್ದೇನೆ.

ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿದ ದಾಖಲಾತಿಗಳ ವಿವರ ಈ ಕೆಳಗಿನಂತಿದೆ.

1. ದಾವಾ ಸ್ವತ್ತನ್ನು 1960 ರಲ್ಲಿ ನನ್ನ ತಾತನವರು ಖರೀದಿ ಮಾಡಿದರು ಎಂದು ತೋರಿಸಲು ಕ್ರಯ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 01 ಎಂದು ಗುರುತಿಸಲಾಯಿತು. ಅದರ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 02 ಎಂದು ಗುರುತಿಸಲಾಯಿತು.
2. ದಾವಾ ಸ್ವತ್ತಿನ ಭರಮಪ್ಪ ಅಂದರೆ ನಮ್ಮ ತಾತನ ಹೆಸರಿನಲ್ಲಿ ಇತ್ತು ಎಂದು ತೋರಿಸಲು 2 ಆರ್ ಟಿ ಸಿ ಯನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿಃ 03 ಎಂದು ಗುರುತಿಸಲಾಯಿತು.
3. 2 ನೇ ಪ್ರತಿವಾದಿಯ ಹೆಸರಿನಲ್ಲಿರುವ 4 ಆರ್ ಟಿ ಸಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿಃ 04 ಎಂದು ಗುರುತಿಸಲಾಯಿತು.
4. ದಾವಾ ಸ್ವತ್ತಿಗೆ ಸಂಬಂಧಿಸಿದ ಮ್ಯುಟೇಶನ್ ಕಾಪಿ ತಮ್ಮ ಕಚೇರಿಯಲ್ಲಿ ಲಭ್ಯವಿಲ್ಲ ಎಂದು 2 ನೇ ಪ್ರತಿವಾದಿಗೆ ನೀಡಿರುವ ಹಿಂಬರಹ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿಃ 05 ಎಂದು ಗುರುತಿಸಲಾಯಿತು.
5. ದಾವಾ ಸ್ವತ್ತಿಗೆ ಸಂಬಂಧಿಸಿದ ಈಸಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿಃ 06 ಎಂದು ಗುರುತಿಸಲಾಯಿತು.
6. ಆಕಾರ್ ಬಂದ್ ಹಾಗೂ ನಕ್ಷೆಯ ಯಥಾ ನಕಲನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾರೆಯಾಗಿ ನಿಪಿಃ 07 ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆಃ ಮುಕ್ತಾಯ

ಪ್ರತಿವಾದಿ ಏಕಪಕ್ಷೀಯಾಗಿದ್ದರಿಂದ ಪಾಟೀ ಸವಾಲು ಇಲ್ಲವೆಂದು ತೆಗೆದುಕೊಳ್ಳಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.